ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು : ಅಂಗೀಕರಿಸಿದ ವಂದನಾ ನಿರ್ಣಯವನ್ನು ಸನ್ಮಾನ್ಯ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗುವುದು.

3. ಚುನಾವಣಾ ಪ್ರಸ್ತಾವ

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ "ದಿನಾಂಕ 14ನೇ ಜೂನ್ 2004ರಂದು ಕರ್ನಾಟಕ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಹಾಗೂ ಅನಾಥಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು ಚುನಾವಣಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಈ ಕುರಿತು ವಿವಿಧ ಪಕ್ಷಗಳ ಸಚೇತಕರುಗಳು ನೀಡಿರುವ ಒಡಂಬಡಿಕೆ ಪಟ್ಟಿಯ ರೀತ್ಯಾ ಮಾನ್ಯ ವಿಧಾನಸಭೆ ಸದಸ್ಯರುಗಳನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ಅನಾಥಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಮಾನ್ಯ ಸದಸ್ಯರನ್ನು ನೇಮಿಸಲು ಮಾನು ವಿಧಾನ ಸಭಾಧ್ಯಕ್ಷರಿಗೆ ಅಧಿಕಾರವನ್ನು ಈ ಸದನವು ನೀಡುತ್ತದೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, " ದಿನಾಂಕ 14ನೇ ಜೂನ್ 2004ರಂದು ಕರ್ನಾಟಕ ವಿಧಾನಮಂಡಲದ ವಿವಿಧ ಸ್ಥಾಯಿ ಸಮಿತಿಗಳಿಗೆ ಹಾಗೂ ಅನಾಥಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು ಚುನಾವಣಾ ಕಾರ್ಯಕ್ರಮ ವೇಳಾಪಟ್ಟಿಯನ್ನು ಹೊರಡಿಸಲಾಗಿರುತ್ತದೆ. ಈ ಕುರಿತು ವಿವಿಧ ಪಕ್ಷಗಳ ಸಚೇತಕರುಗಳು ನೀಡಿರುವ ಒಡಂಬಡಿಕೆ ಪಟ್ಟಿಯ ರೀತ್ಯಾ ಮಾನ್ಯ ವಿಧಾನಸಭೆ ಸದಸ್ಯರುಗಳನ್ನೊಳಗೊಂಡ ವಿವಿಧ ಸಮಿತಿಗಳನ್ನು ರಚಿಸಲು ಹಾಗೂ ಅನಾಥಾಲಯ ಮತ್ತು ಧರ್ಮ ಸಂಸ್ಥೆಗಳು (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಮಂಡಳಿಗೆ ಮಾನ್ಯ ಸದಸ್ಯರನ್ನು ನೇಮಿಸಲು ಮಾನ್ಯ ವಿಧಾನ ಸಭಾಧ್ಯಕ್ಷರಿಗೆ ಅಧಿಕಾರವನ್ನು ಈ ಸದನವು ನೀಡುತ್ತದೆ",

(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು)

4. ಸಚಿವರ ಹೇಳಿಕೆ.

ಜೂನ್ 2004 ರಿಂದ ಆಗಸ್ಟ್-2004 ರ ಮುಂಗಾರಿನ ಅವಧಿಯಲ್ಲಿ ವಿದ್ಯುತ್ ಬಳಕೆಯನ್ನು ಹೆಚ್ಚುಸುವುದರ ಬಗ್ಗ ಲೋಕೋಪಯೋಗಿ ಹಾಗೂ ವಿದ್ಯುತ್ ಸಚಿವರ ಹೇಳಿಕೆ

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) : ಮಾನ್ಯ ಅಧ್ಯಕ್ಷರೆ, 2004ರ ಮಾರ್ಚ್ ತಿಂಗಳಿನಲ್ಲಿ ರಾಜ್ಯದ ವಿದ್ಯುತ್ ಬೇಡಿಕೆಯ ಶೃಂಗಕ್ಕೇರಿ 100 ದಶಲಕ್ಷಯೂನಿಟ್ಟುಗಳಿಗೆ (ದ.ಲ.ಯೂ.) ಏರಿತು. ತರುವಾಯ ಈ ಬೇಡಿಕೆಯ 92 ದ.ಲ.ಯೂ ಗಳಿಗೆ ಇಳಿಯಿತು. ಮೇ ತಿಂಗಳಿನಲ್ಲಿ ಒಳ್ಳೆಯ ಮಳೆಯಾಯಿತು ಮತ್ತು ಇದು ಈ ತಿಂಗಳಿನಲ್ಲಿಯೂ ಮುಂದುವರೆದಿದೆ. ವಿದ್ಯುತ್